(c) ಈ ಖಚ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟ್ ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟ್ ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ನೆರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟ್ ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನುತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್ ಇ೯ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 16ನೆ ಏಪ್ರಿಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಆನೇಕಲ್ ತಾಲ್ಲೂಕಿಗೆ ಸಮ್ಮಂಧಪಟ್ಟ 1846–47ನೆ ಇಸವಿ ಲಾಗಾಯಿತು 1873–74ನೆ ಇಸವಿ ವರಿಗೆ ಕುಳವಾರ್ ಚಿಟ್ಟುಗಳನ್ನ ಹಾಲಿ ಜಾರಿಯಲ್ಲಿರುವ ರೂಲ್ಸು ಅನುಸರಿಸಿ ಚಲಾಯಿಸಲ್ಪಡುತ್ತೆ. ಇವುಗಳ ದಾಖ್ಲೇಗಳನ್ನು ಅಪೇಕ್ಷಿಸತಕ್ಕವರು ಈ ಲಾಗಾಯಿತು ಮೂರು ತಿಂಗಳ ಒಳಗಾಗಿ ದರಖಾಸ್ತು ಕೊಟ್ಟು ಕಾಪಿಗಳನ್ನು ಪಡೆಯಬಹುದು.

ಬಿ. ಜಿ. ಕೊಮಾರಸಾಮಿ ನಾಯಿಕ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಸ್ಯ 1909ನೆ ಇಸವಿ ಫೆಬ್ರವರಿ 27ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟ್.
2. ,, ಎ. ವೇದಾಂತದೇಸಿಗಂ ಐಯ್ಯಂಗಾರ್ರವರು, ವೈಸ್ ಪ್ರೆಸಿಡೆಂಟ್.
3. ,, ಜಿ. ಆರಾವಮುದೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಸಬ್ ಡಿವಿಜ್ ಆಫಿಸರ್, ಚಿಕ್ಕಬಳ್ಳಾಪುರ.
4. ,, ಮಿಾರ್ ಹಂಜಾ ಹುಸೇನ್ ಸಾಹೇಬರವರು, ಬಿ. ಎ., ಬಿ. ಎಲ್., ಸಬ್ ಡಿವೀಜ್ಆಫಿಸರ್, ಮಾಲೂರು.
5. ,, ವಿ. ಅಯ್ಯಾಸ್ವಾಮಿ ಅಯ್ಯರವರು, ಬಿ. ಎ., ಬಿ. ಸಿ. ಇ., ಎಗ್ಸ್‌ಕ್ಯೂಟಿವ್ ಇಂಜನಿಯರ್, ಕೋಲಾರ.
6. ,, ಎಸ್. ಗೋಪಾಲರಾವ್, ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್.
7. ,, ಸಿ. ಜಿ. ಹನುಮಂತಸಿಂಗ್, ಎಲ್. ಎಂ. ಅಂಡ್ ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ ಕೋಲಾರ.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜು (ಡಿ)

8. ಮಿ॥ ಮಂಜಲಿ ಬೈರೇಗೌಡರು, ಕೋಲಾರ.
9. ,, ಪೀರ್ ನವಾಜ್‌ಖಾರವರು, ಬಾರಿಂಗ್‌ಪೇಟೆ.
10. ,, ಕಾಸ್ಟ್ರಿ ಹೈದರ್‌ಸಾಹೇಬರು, ಮುಳಬಾಗಲು.
11. ,, ವೆಂಕಟರಮಣಪ್ಪನವರು, ಮಾಲೂರು.
12. ,, ಕೆ ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಹನುಮೇಗೌಡರು, ಶಿಡ್ಲಘಟ್ಟ.
14. ,, ಹಗ್ಗೇನಹಳ್ಳಿ ಕೃಷ್ಣಾಚಾರ್ರು, ಗೋರಿಬಿದನೂರು.
15. ,, ತಿಮ್ಮಪ್ಪನವರು, ಬಾಗೇಪಲ್ಲಿ.
16. ,, ಆದಿನಾರಣಪ್ಪನವರು, ಗುಡಿಬಂಡೆ.
17. ,, ಸಿ. ನಾರಾಯಣಸಾಫು ಶೆಟ್ಟಿಯವರು, ಚಿಕ್ಕಬಳ್ಳಾಪುರ.